ಸೈಸೆಕ್ ಕೆ-ಟೆಕ್ ಉನ್ನತಜ್ಞಾನ ಕೇಂದ್ರ ಸೈಬರ್ ಸೆಕ್ಯುರಿಟಿ ಕರ್ನಾಟಕ

CySecK Cyber Security Karnataka K-Tech CoE for Cyber Security

# ಸೈಬರ್ ವಾರ್ತಿಕ

## ಅಕ್ಟೋಬರ್ 2023 ಸಂಚಿಕೆ

# CYBER VARTIKA

## OCTOBER 2023 EDITION

## ಈ ಸಂಚಿಕೆಯಲ್ಲಿ

- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಸೈಸೆಕ್ ವರದಿ

## IN THIS ISSUE

- Foreword
- Curated News
- CySecK updates

ಸೈಬರ್ ವಾರ್ತಿಕಾವನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ದಿಪತ್ರಿಕೆಯ ಮುಕ್ತ ಚಂದಾದಾರರಾಗಿ!
https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

# ಮುನ್ನುಡಿ | FOREWORD



## ವೆಂಕಟ್ ರಾಮ್‌ಸೇತ್

### ಸಂಸ್ಥಾಪಕ - FlexibleIR

ಈ ಮುನ್ನುಡಿಯು ಪ್ರಸ್ತುತ ನಮ್ಮ ರಾಜ್ಯವನ್ನು ಕಾಡುತ್ತಿರುವ, ಹಾಗೂ ಹೆಚ್ಚುತ್ತಿರುವ ಸೈಬರ್ ಅಪರಾಧ ಘಟನೆಗಳ ಸಮಸ್ಯೆಯನ್ನು ಪರಿಹರಿಸಲು ಎದುರು ನೋಡುತ್ತಿದೆ. ನೀವು ಮುಂದೆ ಓದುತ್ತಿದ್ದಂತೆ, ಸೈಬರ್ ಅಪರಾಧಗಳು ಹೆಚ್ಚುತ್ತಿರುವ ವೇಗ ಮತ್ತು ವೈವಿಧ್ಯತೆಯನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ. ಈ ಅಪರಾಧಗಳು ಹೆಚ್ಚು ಸಂಕೀರ್ಣ ಮತ್ತು ಬಹುಮುಖಿಯಾಗುತ್ತಿವೆ, ಇದು ತನಿಖೆ ಮತ್ತು ವಿಧಿವಿಜ್ಞಾನ ವಿಶ್ಲೇಷಣೆಯನ್ನು ಹೆಚ್ಚು ಸವಾಲಾಗಿ ಮಾಡುತ್ತಿದೆ. ಪರಿಣಾಮವಾಗಿ, ಸೈಬರ್ ಅಪರಾಧ ವಿಭಾಗಗಳು ತಮ್ಮ ತನಿಖಾ ಸಾಮರ್ಥ್ಯವನ್ನು ಗಮನಾರ್ಹವಾಗಿ ಹೆಚ್ಚಿಸಬೇಕಿದೆ. ತನಿಖಾಧಿಕಾರಿಗಳಿಗೆ ರಾಷ್ಟ್ರವ್ಯಾಪಿ ಬೃಹತ್ ಸಾಮರ್ಥ್ಯ ವರ್ಧನೆ ಉಪಕ್ರಮದ ತುರ್ತು ಅಗತ್ಯತೆಗಳು ಹೆಚ್ಚಾಗಿವೆ.

ಈ ಸುದ್ದಿ ಪತ್ರದಲ್ಲಿ ತಿಳಿಸಿರುವ ಪ್ರತಿಯೊಂದು case studies ಗಳನ್ನು ನೋಡಿದರೆ, ತನಿಖಾ ತಂಡಗಳು, ವಿಶೇಷವಾಗಿ ಸೈಬರ್ ಕ್ರೈಮ್ ಪೊಲೀಸ್ ವಿಭಾಗಗಳು ಈ ಅಪರಾಧಗಳನ್ನು ಹೇಗೆ ಭೇದಿಸುತ್ತಿವೆ ಮತ್ತು ಅಪರಾಧ ಸಂಖ್ಯೆಗಳನ್ನು ತಗ್ಗಿಸಿಸುವಲ್ಲಿ ಹೇಗೆ ತಮ್ಮನ್ನು ತೊಡಗಿಸಿಕೊಂಡಿವೆ ಎಂಬುದನ್ನು ವಿವರಿಸುತ್ತಿವೆ. ರಚನಾತ್ಮಕ ಮತ್ತು ದಾಖಲಿತ ತನಿಖಾ ಹಂತಗಳು ಇಲ್ಲಿ ನಿರ್ಣಾಯಕ ಪಾತ್ರವಹಿಸುತ್ತಿದ್ದು, ಇದು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ವಿಶಾಲ ಜ್ಞಾನದ ನೆಲೆಯನ್ನು ರಚಿಸಲು ಕೊಡುಗೆ ನೀಡುತ್ತದೆ. ಎಂತಹ ದೊಡ್ಡ ಪ್ರಕರಣಗಳೇ ಆಗಿದ್ದರೂ, ಬೃಹತ್ ಪ್ರಮಾಣದಲ್ಲಿ ಪರಿಹರಿಸಲು ಕ್ರಮ ವಹಿಸಲು ಹುರಿದುಂಬಿಸುತ್ತವೆ.

ನಾನು ನನ್ನ ಮುನ್ನುಡಿಯನ್ನು ಒಂದು ಆಕರ್ಷಕ ಉಪಕಥೆಯೊಂದಿಗೆ ಪ್ರಾರಂಭಿಸುತ್ತೇನೆ. ಅಕ್ಟೋಬರ್ ಸೈಬರ್ ಭದ್ರತಾ ಜಾಗೃತಿ ಮಾಸ, ಈ ಸಮಯದಲ್ಲಿ ನಾವು ಕರ್ನಾಟಕದ ವಿವಿಧ ನಗರಗಳ 60 ಕ್ಕೂ ಹೆಚ್ಚು ಪೊಲೀಸ್ ಅಧಿಕಾರಿಗಳನ್ನು ಒಳಗೊಂಡ ರಾನ್‌ಸಮ್‌ವೇರ್ ಪ್ರತಿಕ್ರಿಯೆ ಕಾರ್ಯಕ್ರಮವನ್ನು ನಡೆಸಿದ್ದೇವೆ. ವಿವಿಧ ರಾನ್‌ಸಮ್‌ವೇರ್ ಕುಟುಂಬಗಳ ಕಾರ್ಯಾಚರಣೆಗಳು ಮತ್ತು ಅವುಗಳ ಮೂಲ ಉದ್ದೇಶಗಳನ್ನು ಅರ್ಥಮಾಡಿಕೊಳ್ಳುವತ್ತ ನಮ್ಮ ಗಮನವಿತ್ತು. ಭೌತಿಕ ಜಗತ್ತಿನಲ್ಲಿ ಅಪರಾಧಿಗಳ ಕಾರ್ಯವಿಧಾನವನ್ನು ವಿಶ್ಲೇಷಿಸುವಲ್ಲಿ ಪೊಲೀಸ್ ಅಧಿಕಾರಿಗಳು ಅಭಿವೃದ್ಧಿಪಡಿಸಿದ ಪ್ರಾವೀಣ್ಯತೆ ನಮ್ಮ ಚರ್ಚೆಯ ಸಮಯದಲ್ಲಿ ನನ್ನನ್ನು ಆಕರ್ಷಿಸಿತು. ಈಗ, ಸೈಬರ್ ಅಪರಾಧಗಳನ್ನು ಎದುರಿಸಲು ಈ ಪರಿಣತಿಯ ಸಂಭಾವ್ಯ ಅನ್ವಯವನ್ನು ಪರಿಗಣಿಸಿ! ಸೈಬರ್ ಅಪರಾಧಿಗಳು ತಮ್ಮದೇ ಆದ ಕಾರ್ಯವಿಧಾನವನ್ನು ಹೊಂದಿದ್ದಾರೆ, ಮತ್ತು ಅದರ ಆಳವಾದ ತಿಳುವಳಿಕೆ ಈಗಾಗಲೇ ಯುದ್ಧದ ಅರ್ಧದಷ್ಟು ಗೆದ್ದಿದೆ.

ಅಪರಾಧ ತನಿಖಾಧಿಕಾರಿಗಳು ಸೈಬರ್ ಅಪರಾಧಗಳನ್ನು ನಿಭಾಯಿಸಲು ಜಾಗೃತಿ, ತರಬೇತಿ ಮತ್ತು ಸಾಧನಗಳೊಂದಿಗೆ ಸುಸಜ್ಜಿತರಾಗಿರಬೇಕು. ಅದೃಷ್ಟವಶಾತ್, ದಶಕಗಳ ಅನುಭವದಲ್ಲಿ ಸಂಗ್ರಹಿಸಿದ ಅಪಾರ ಜ್ಞಾನದೊಂದಿಗೆ ನಾವು ಅಸಾಧಾರಣ ಪೊಲೀಸ್ ಕಾರ್ಯಪಡೆಯನ್ನು ಹೊಂದಿದ್ದೇವೆ. ಸೈಬರ್ ಅಪರಾಧ ತನಿಖೆಗೆ ಅವರ ಸುಗಮ ಪರಿವರ್ತನೆಗೆ ಅನುಕೂಲವಾಗುವಂತೆ ನಾವು ಕಾರ್ಯಕ್ರಮವನ್ನು ಕಾರ್ಯಗತಗೊಳಿಸಲು ಸಾಧ್ಯವಾದರೆ, ಅದು ವಿಶಾಲ ಪ್ರಮಾಣದಲ್ಲಿ ಗಮನಾರ್ಹ ಸಾಮರ್ಥ್ಯ ವರ್ಧನೆಗೆ ಕಾರಣವಾಗುತ್ತದೆ.

ಅಕ್ಟೋಬರ್ ಸೈಬರ್ ಭದ್ರತೆಯ ಜಾಗೃತಿ ಮಾಸಾಚರಣೆಯ ವೇಳೆ ಈ ಮುನ್ನುಡಿಯನ್ನು ಬರೆಯಲು ನನಗೆ ಅವಕಾಶ ನೀಡಿದ್ದಕ್ಕಾಗಿ ನಾನು ಸೈಸೆಕ್ ಗೆ ನನ್ನ ಹೃತ್ಪೂರ್ವಕ ಕೃತಜ್ಞತೆಯನ್ನು ಅರ್ಪಿಸುತ್ತೇನೆ.

## Venkat Ramshet

### Founder: FlexibleIR

This foreword looks ahead to address a pressing issue—the escalating number of cybercrime incidents that currently plague our state. As you read further, you will come to understand the rapidity and diversity with which cybercrimes are proliferating. These offenses are also becoming increasingly intricate and multifaceted, making investigation and forensic analysis more challenging. Consequently, the cybercrime divisions must significantly enhance their investigative and response capabilities. The urgent need for a massive nationwide capacity-building initiative for investigators becomes evident.

One way to approach each of these incidents is to view them as case studies, delving into how the investigative teams, especially the cybercrime police divisions, analyzed and mitigated these crimes. Well-structured and documented investigation steps are crucial. This contributes to the creation of a vast knowledge base at the state and national levels, bolstering our capacity to address such crimes on a larger scale.

Let me commence with an engaging anecdote. October marks Cyber Security Awareness Month, during which we conducted a Ransomware Response program involving over 60 police officers from various cities in Karnataka. Our focus was on understanding the operations of different Ransomware families and their underlying motives. What struck me during our discussions is the proficiency that police officers have developed in analyzing the modus operandi of criminals in the physical world. Now, consider the potential application of this expertise to combat cybercrimes! Cybercriminals have their own modus operandi, and a deep understanding of it is already half the battle won.

Crime investigators need to be well-equipped with awareness, training, and tools to tackle cybercrimes. Fortunately, we possess an exceptional police workforce with vast knowledge accumulated over decades of experience. If we can implement a program to facilitate their smooth transition to cybercrime investigation, it will result in significant capacity-building on a broad scale.

I extend my heartfelt gratitude to CySecK for giving me the opportunity to pen this foreword, especially especially as October is the cyber awareness month.

# ಪ್ರಮುಖ ಸೈಬರ್ ಸುದ್ದಿ

## ಸೈಬರ್ ಸುರಕ್ಷತೆಯ ಹೆಚ್ಚಳಕ್ಕೆ ಗೂಗಲ್ ಕ್ರಮ



ಗೂಗಲ್‌ನಲ್ಲಿ ಬಲವಾದ ರಕ್ಷಣೆಗಾಗಿ **"ಪಾಸ್ ವರ್ಡ್ ಲೆಸ್ ಬೈ ಡೀಫಾಲ್ಟ್"** ಅನ್ನು ಪರಿಚಯಿಸುತ್ತಿದೆ. Gmail ಬಳಕೆದಾರರು AI ಚಾಲಿತ ರಕ್ಷಣೆಯಿಂದ ಪ್ರಯೋಜನ ಪಡೆಯಬಹುದು, ಇದು 99.9% ಬೆದರಿಕೆಗಳನ್ನು ತಡೆಯುತ್ತದೆ ಎಂದು ಮಾಹಿತಿ ನಿಡಿದೆ.

## UPI ಆಧಾರಿತ ಆನ್‌ಲೈನ್ ಹಣಕಾಸು ಹಗರಣಗಳಲ್ಲಿ ಭಾರತ ಮೇಲುಗೈ – FCRF ವರದಿ



ಜನವರಿ 2020 ರಿಂದ ಜೂನ್ 2023 ರವರೆಗೆ ಭಾರತದಲ್ಲಿನ ಎಲ್ಲಾ ಆನ್ಲೈನ್ ಹಣಕಾಸು ವಂಚನೆಗಳಲ್ಲಿ UPI ಆಧಾರಿತ ವಂಚನೆಗಳೇ ಅರ್ಧದಷ್ಟು ಎಂದು ಫ್ಯೂಚರ್ ಕ್ರೈಮ್ ರಿಸರ್ಚ್ ಫೌಂಡೇಶನ್ (FCRF) ವರದಿ ಮಾಡಿದೆ.

## ಹಡಗುಗಳಲ್ಲಿ ಸೈಬರ್ ಸುರಕ್ಷತಾ ಮಾನದಂಡಗಳನ್ನು ಹೆಚ್ಚಿಸಲು ಮುಂದಾದ IACS



ಹಡಗುಗಳಿಗೆ ಸೈಬರ್ ಅವಶ್ಯಕತೆಗಳ ಅನ್ವಯವನ್ನು ಸುಧಾರಿಸಲು ಇಂಟರ್‌ನ್ಯಾಷಿನಲ್ ಅಸೋಸಿಯೇಷನ್ ಆಫ್ ಕ್ಲಾಸಿಫಿಕೇಶನ್ ಸೊಸೈಟೀಸ್ (ಐಎಸಿಎಸ್) ಸೈಬರ್ ಸುರಕ್ಷತೆಯ ಬಗ್ಗೆ ತನ್ನ ಅವಶ್ಯಕತೆಗಳನ್ನು ನವೀಕರಿಸಿದೆ. ಈ ಪರಿಷ್ಕೃತ ಮಾನದಂಡಗಳು ಜುಲೈ 1, 2024 ರ ನಂತರ ನಿರ್ಮಿಸಲಾದ ಹೊಸ ಹಡಗುಗಳಿಗೆ ಅನ್ವಯಿಸುತ್ತವೆ, ಭದ್ರತೆಗೆ ಹೆಚ್ಚಿನ ಸ್ಪಷ್ಟತೆ ಮತ್ತು ಉದ್ಯಮ ಜೋಡಣೆಗೆ ಇದು ಸಹಕಾರಿಯಾಗಿದೆ.

## ರೂ.854 ಕೋಟಿ ಸೈಬರ್ ವಂಚನೆ ಪ್ರಕರಣ ಪತ್ತೆ ಹಚ್ಚಿದ ಬೆಂಗಳೂರು ಪೊಲೀಸರು



ಕ್ಲಿಕ್‌ಬೈಟ್ ಜಾಹೀರಾತುಗಳ ಮೂಲಕ ದೇಶಾದ್ಯಂತ ೫ಸಾವಿರಕ್ಕೂ ಹೆಚ್ಚು ಜನರನ್ನು ಬಲಿಪಶುಗಳನ್ನಾಗಿಸಿದ ಸೈಬರ್ ಕ್ರೈಮ್ ಗ್ಯಾಂಗ್‌ಗೆ ಸೇರಿದ ೬ ಮಂದಿ ಆರೋಪಿಗಳನ್ನು ಬೆಂಗಳೂರಿನ ಪೊಲೀಸರು ಬಂಧಿಸಿದ್ದಾರೆ. ಈ ಘಟನೆಯ ೩ ಕಿಂಗ್ ಪಿನ್‌ಗಳು ಪರಾರಿಯಾಗಿದ್ದು, ಇದುವರೆಗೂ ೮೫೪ ಕೋಟಿಗೂ ಹೆಚ್ಚು ವಂಚನೆ ನಡೆಸಿರುವುದು ಪ್ರಾಥಮಿಕ ತನಿಖೆಯಲ್ಲಿ ಬಯಲಾಗಿದೆ.

# ಪ್ರಮುಖ ಸೈಬರ್ ಸುದ್ದಿ

## ಸಾಮಾಜಿಕ ಮಾಧ್ಯಮಗಳಲ್ಲಿನ ನಕಲಿ ಅಂಗಡಿಗಳ ಆನ್‌ಲೈನ್ ಲಿಂಕ್‌ಗಳ ಬಗ್ಗೆ ಎಚ್ಚರಿಕೆ ನೀಡಿದ ತಮಿಳುನಾಡು ಪೊಲೀಸ್



ತಮಿಳುನಾಡು ಪೊಲೀಸರ ಸೈಬರ್ ಅಪರಾಧ ವಿಭಾಗವು ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾದ ಮೋಸದ ವೆಬ್ ಲಿಂಕ್ಗಳ ಬಗ್ಗೆ ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಇತ್ತೀಚೆಗೆ ಸಂತ್ರಸ್ತೆಯೊಬ್ಬರು ನಕಲಿ ಬಿಗ್ ಬಾಸ್ಕೆಟ್ ಜಾಹೀರಾತಿಗೆ ಬಿದ್ದ ಘಟನೆಯನ್ನು ಇಲ್ಲಿ ಉಲ್ಲೇಖಿಸಿದ್ದಾರೆ.

## ಸೂಕ್ಷ್ಮ ಸೈಬರ್ ಅಪರಾಧ ಪ್ರಕರಣಗಳ ಉಸ್ತುವಾರಿ ಚೆನ್ನೈನ ಕೇಂದ್ರ ಅಪರಾಧ ವಿಭಾಗದ ಹೆಗಲಿಗೆ.



ಚೆನ್ನೈನ ಕೇಂದ್ರ ಅಪರಾಧ ವಿಭಾಗವು ಸೂಕ್ಷ್ಮ ಸೈಬರ್ ಅಪರಾಧ ಪ್ರಕರಣಗಳು, ಬ್ಯಾಂಕ್ ವಂಚನೆಗಳು, ನಕಲಿ ಪಾಸ್ಪೋರ್ಟ್ ಮತ್ತು ವೀಸಾ ಪ್ರಕರಣಗಳನ್ನು ನಿರ್ವಹಿಸುತ್ತದೆ ಎಂದು ಇತ್ತೀಚಿನ ಸ್ಥಾಯಿ ಸಮಿತಿ ಆದೇಶದಲ್ಲಿ ತಿಳಿಸಲಾಗಿದೆ.

## ಶಾಲೆಗಳಲ್ಲಿ ಸೈಬರ್ ಭದ್ರತಾ ಅಧಿವೇಶನ ಕಡ್ಡಾಯಗೊಳಿಸಿದ ಚಂಡೀಗಢ



ಕೃತಕ ಬುದ್ಧಿಮತ್ತೆ(AI) ಸಾಧನದಿಂದ ಒಂಬತ್ತು ವಿದ್ಯಾರ್ಥಿಗಳ ಆಕ್ಷೇಪಾರ್ಹ ಚಿತ್ರಗಳನ್ನು ಮಾರ್ಫಿಂಗ್ ಮಾಡಿ ಬಳಸಿದ ಆರೋಪದ ಮೇಲೆ ಬಂಧಿಸಲ್ಪಟ್ಟ ವಿದ್ಯಾರ್ಥಿಯನ್ನು ಒಳಗೊಂಡ ಇತ್ತೀಚಿನ ಸೈಬರ್ ಅಪರಾಧ ಘಟನೆಗೆ ಪ್ರತಿಕ್ರಿಯೆಯಾಗಿ, ಚಂಡೀಗಢ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ (ಸಿಸಿಪಿಸಿಆರ್) ಚಂಡೀಗಢದ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಶಾಲೆಗಳಿಗೆ ಸೈಬರ್ ಭದ್ರತಾ ಅಧಿವೇಶನಗಳನ್ನು ನಡೆಸುವುದನ್ನು ಕಡ್ಡಾಯಗೊಳಿಸಿದೆ.

## ಸೈಬರ್ ಭದ್ರತೆ ಉಪಕ್ರಮಗಳು ಮತ್ತು ಕಾರ್ಯತಂತ್ರಗಳನ್ನು ಬಲಪಡಿಸಲು ಜೆಸಿಸಿಟಿ ಕಾರ್ಯಾಗಾರ



ಲಕ್ನೋದ ಭಾರತೀಯ ಸೈಬರ್ ಅಪರಾಧ ಸಮನ್ವಯ ಕೇಂದ್ರ ಮತ್ತು ಜಂಟಿ ಸೈಬರ್ ಅಪರಾಧ ಸಮನ್ವಯ ತಂಡ (ಜೆಸಿಸಿಟಿ) ಸೈಬರ್ ಭದ್ರತೆಯ ಉಪಕ್ರಮಗಳು ಮತ್ತು ಕಾರ್ಯತಂತ್ರಗಳನ್ನು ಬಲಪಡಿಸುವ ಸಲುವಾಗಿ ಕಾರ್ಯಾಗಾರವನ್ನು ಆಯೋಜಿಸಿತ್ತು. ಕಾರ್ಯಾಗಾರದಲ್ಲಿ, ತಜ್ಞರು ಕಾರ್ಯತಂತ್ರಗಳು ಮತ್ತು ನಾಗರಿಕ ಕೇಂದ್ರಿತ ವಿಷಯಗಳ ಕುರಿತು ಚರ್ಚಿಸಿದರು.

# Top Cyber News

## Google to step up cyber security



Google is introducing "**Passwordless by Default**" for stronger protection. Gmail users can benefit from AI-powered defences, blocking 99.9% of threats.

## UPI Fraud Dominates Online Financial Scams in India, Says FCRF Report



A recent report by Future Crime Research Foundation (FCRF) reveals that UPI frauds accounted for nearly half of all online financial frauds in India from January 2020 to June 2023.

## IACS to raise cyber security standards on ships



The International Association of Classification Societies (IACS) has updated its requirements on cyber security to improve the application of cyber requirements to ships. These revised norms will apply to new vessels built after July 1, 2024, which will contribute to greater clarity of security and industry alignment.

## Bengaluru Police Unravel ₹854-Crore Cyber Heist



Bengaluru police have arrested six persons belonging to a cybercrime gang that has victimised over 5,000 people across the country through clickbait advertisements. Preliminary investigations have revealed that the three kingpins of the incident are absconding and have committed fraud of over Rs 854 crore so far.

# Top Cyber News

## TamilNadu Police Warn of Fake Online Store Links on Social Media



TamilNadu Police's Cyber Crime Wing alerts the public to fraudulent web links posted on social media, citing a recent incident where a victim almost fell for a fake Big Basket ad.

## Chennai Cyber Crime Jurisdiction Revised for Sensitivity and Money Involvement



The Central Crime Branch in Chennai will handle sensitive cybercrime cases, bank frauds, fake passport, and visa cases, regardless of the money involved, as per a recent Standing Order.

## Chandigarh Schools Mandated to Conduct Cyber Security Sessions Following Student Cybercrime Incident



In response to a recent cybercrime incident involving a student who was apprehended for morphing and using objectionable pictures of nine students with an artificial intelligence tool, the Chandigarh Commission for the Protection of Child Rights (CCPCR) will mandate all schools in Chandigarh, both private and government, to conduct cyber security sessions.

## JCCT Workshop for Strengthening Cybersecurity Initiatives and Strategies



At a workshop on the Joint Cyber Crime Coordination Team (JCCT) of the Indian Cyber Crime Coordination Centre in Lucknow, experts engaged in discussions centred on strategies and citizen-centric initiatives.

# ಆನ್‌ಲೈನ್ ಮೋಸಗಳು

## ಬೆಂಗಳೂರೊಂದರಲ್ಲೇ ಸೈಬರ್ ಅಪರಾಧದಿಂದ 470 ಕೋಟಿ ನಷ್ಟ



ಬೆಂಗಳೂರು ಪೊಲೀಸ್ ಅಂಕಿಅಂಶಗಳ ವಿಶ್ಲೇಷಣೆಯ ಪ್ರಕಾರ, ನಗರದ ನಿವಾಸಿಗಳು ವಿವಿಧ ಸೈಬರ್ ಅಪರಾಧಗಳಿಂದ ಪ್ರತಿದಿನ ರೂ.1.71 ಕೋಟಿ ಗಿಂತ ಹೆಚ್ಚು ನಷ್ಟವನ್ನು ಅನುಭವಿಸುತ್ತಿರುವುದು ವರದಿಯಾಗಿದೆ. ಕಳೆದ 9 ತಿಂಗಳಲ್ಲಿ 12,600 ಕ್ಕೂ ಹೆಚ್ಚು ಪ್ರಕರಣಗಳು ವರದಿಯಾಗಿದ್ದು, ಹೆಚ್ಚಿನವು ಆನ್ಲೈನ್ ಉದ್ಯೋಗ ಮತ್ತು ಡೆಬಿಟ್ / ಕ್ರೆಡಿಟ್ ಕಾರ್ಡ್ ವಂಚನೆಗೆ ಸಂಬಂಧಿಸಿದ್ದಾಗಿವೆ.

## ಎಸ್ಕ್ರೊ ಖಾತೆಯಿಂದ $ 738,182 ಫಿಶಿಂಗ್ ಹಗರಣವನ್ನು ವಿಫಲಗೊಳಿಸಿದ ಬಯೋಕಾನ್

ಭಾರತೀಯ ಬಯೋಫಾರ್ಮಾಸ್ಯುಟಿಕಲ್ ಕಂಪನಿ ಬಯೋಕಾನ್ ತನಗೆ ತಿಳಿಯದೆ ಫಿಶಿಂಗ್ ಯೋಜನೆಯಲ್ಲಿ ವಂಚಕರಿಗೆ $ 738,182 ಅನ್ನು ವರ್ಗಾಯಿಸಿತ್ತು. ಆದರೆ ಎಸ್ಕ್ರೊ ಖಾತೆಯ ಬಳಕೆಯು ಅವರ ಹಣವನ್ನು ರಕ್ಷಿಸಿತು, ಇದರಿಂದಾಗಿ ವರ್ಗಾಯಿಸಲಾದ ಸಂಪೂರ್ಣ ಹಣ ಮರಳಿ ಪಡೆಯಲು ಸಹಾಯವಾಗಿರುವ ಘಟನೆ ಬೆಳಕಿಗೆ ಬಂದಿದೆ.

## AEPS ಆಧಾರಿತ ಸೈಬರ್ ವಂಚನೆ ಪ್ರಕರಣಗಳಲ್ಲಿ ಭಾರೀ ಹೆಚ್ಚಳ: ಆಧಾರ್ ಬಯೋಮೆಟ್ರಿಕ್ ಲಾಕ್‌ಗೆ ಸೂಚನೆ



ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ದಾಖಲೆಗಳ ನೋಂದಣಿ ವೇಳೆ ಆಧಾರ್ ವಿವರ ಮತ್ತು ಬೆರಳಚ್ಚುಗಳನ್ನು ನೀಡಿದ ನಂತರ ಅನೇಕ ಸಂತ್ರಸ್ತರು ತಮ್ಮ ಬ್ಯಾಂಕ್ ಖಾತೆಗಳಿಂದ ಅನಧಿಕೃತ ಕಡಿತಗಳನ್ನು ವರದಿ ಮಾಡಿದ್ದಾರೆ. ಕನಿಷ್ಠ 15 ವ್ಯಕ್ತಿಗಳು ದೂರುಗಳನ್ನು ದಾಖಲಿಸಿದ್ದು, 10,000 ರೂ.ಗಳಿಂದ 1 ಲಕ್ಷ ರೂ.ಗಳವರೆಗೆ ನಷ್ಟವಾಗಿರುವ ಪ್ರಕರಣಗಳು ಮಂಗಳೂರಿನಲ್ಲಿ ವರದಿಯಾಗಿವೆ.

## ಸಂಸದ ದಯಾನಿಧಿ ಮಾರನ್‌ಗೂ ತಟ್ಟಿದ ಸೈಬರ್ ವಂಚನೆ



ಅನಧಿಕೃತ ಬ್ಯಾಂಕ್ ಡೆಬಿಟ್ ಹಗರಣಕ್ಕೆ ಬಲಿಯಾಗಿರುವ ಡಿಎಂಕೆ ಸಂಸದ ದಯಾನಿಧಿ ಮಾರನ್ ತಮ್ಮ ಖಾತೆಯಿಂದ ರೂ. 99,999 ಗಳನ್ನು ಮೋಸದಿಂದ ಡೆಬಿಟ್ ಮಾಡಲಾಗಿದೆ ಎಂದು ದೂರು ದಾಖಲಿಸಿದ್ದಾರೆ. ಅಪರಿಚಿತ ವ್ಯಕ್ತಿಯಿಂದ ಬಂದ ಕರೆಯನ್ನು ಸ್ವೀಕರಿಸಿದ ಪರಿಣಾಮ ಈ ಘಟನೆ ನಡೆದಿದ್ದು ಇದೀಗ ವರದಿಯಾಗಿದೆ.

## ಕೆಲಸದ ಆಮಿಷವೊಡ್ಡಿ ರೂ.18.35 ಲಕ್ಷಗಳನ್ನು ಪೀಕಿದ ವಂಚಕರು



ಸೈಬರ್ ವಂಚಕರು ನಾಸಿಕ್ ಮೂಲದ 39 ವರ್ಷದ ವ್ಯಕ್ತಿಗೆ ಮನೆಯಿಂದ ಕೆಲಸ ಮಾಡುವ ಅವಕಾಶದ ಆಮಿಷವೊಡ್ಡಿ ರೂ.18.35 ಲಕ್ಷ ಗಳನ್ನು ಪೀಕಿರುವ ಘಟನೆ ಮಹಾರಾಷ್ಟ್ರದಲ್ಲಿ ವರದಿಯಾಗಿದೆ.

# ಆನ್‌ಲೈನ್ ಮೋಸಗಳು

## ನಕಲಿ ದಾಖಲೆಗಳನ್ನು ಒಳಗೊಂಡ ರೂ.25 ಕೋಟಿ ಗಳ ಪಾವತಿ ಗೇಟ್‌ವೇ ಹ್ಯಾಕ್: ನಾಲ್ವರ ವಿರುದ್ಧ ಪ್ರಕರಣ ದಾಖಲು

ನಕಲಿ ಸಂಸ್ಥೆ ಮತ್ತು ನಕಲಿ ದಾಖಲೆಗಳಿಗೆ ಸಂಬಂಧಿಸಿದ ಪಾವತಿ ಗೇಟ್‌ವೇ ಹ್ಯಾಕ್ ಆಗಿದ್ದು, ವಿದೇಶಿ ಖಾತೆ ವರ್ಗಾವಣೆಯೊಂದಿಗೆ ರೂ.16,180 ಕೋಟಿ ಗಿಂತ ಹೆಚ್ಚಿನ ವಹಿವಾಟುಗಳನ್ನು ಬಹಿರಂಗಪಡಿಸಲಾಗಿದೆ.

## ಲೋನ್ ಆ್ಯಪ್ ಏಜೆಂಟರ ಒತ್ತಡಕ್ಕೆ ಮಣಿದು ವಿಮಾನ ನಿಲ್ದಾಣದ ಮೇಲ್ವಿಚಾರಕ ಆತ್ಮಹತ್ಯೆ



ಆನ್ಲೈನ್ ಲೋನ್ ಅಪ್ಲಿಕೇಶನ್ ಏಜೆಂಟರು ಅಶ್ಲೀಲ ವೀಡಿಯೊಗಳನ್ನು ಕಳುಹಿಸಿ ಕಿರುಕುಳ ನೀಡುತ್ತಿರುವುದಾಗಿ ಹೇಳಿರುವ 22 ವರ್ಷದ ವಿಮಾನ ನಿಲ್ದಾಣದ ಮೇಲ್ವಿಚಾರಕರೊಬ್ಬರು ಆತ್ಮಹತ್ಯೆ ಶರಣಾಗಿರುವ ಘಟನೆ ನವದೆಹಲಿಯಲ್ಲಿ ವರದಿಯಾಗಿದೆ.

## ಬೃಹತ್ ಸೈಬರ್ ವಂಚನೆ ಜಾಲವನ್ನು ಭೇದಿಸುವಲ್ಲಿ ಬೆಂಗಳುರು ಪೊಲೀಸರು ಯಶಸ್ವಿ



ಎರಡು ವರ್ಷಗಳಲ್ಲಿ 5000 ಕ್ಕೂ ಹೆಚ್ಚು ಪ್ರಕರಣಗಳಿಗೆ ಸಂಬಂಧಿಸಿದ 84 ಬ್ಯಾಂಕ್ ಖಾತೆಗಳ ಮೂಲಕ ರೂ.854 ಕೋಟಿ ಗಳನ್ನು ವಂಚಿಸಿದ ಬೃಹತ್ ಆನ್ಲೈನ್ ವಂಚನೆ ಜಾಲವನ್ನು ಬೆಂಗಳೂರು ಸೈಬರ್ ಪೊಲೀಸರು ಪತ್ತೆ ಹಚ್ಚಿದ್ದಾರೆ. ಈ ಜಾಲವು ಸಾಮಾಜಿಕ ಮಾಧ್ಯಮಗಳ ಮೂಲಕ ಭಾರತದಾದ್ಯಂತ ಸಕ್ರಿಯವಾಗಿದ್ದು, MBA ಪದವೀದರ ಮತ್ತು Software ಎಂಜಿನಿಯರ್ ಈ ಪ್ರಕರಣದ ಮಾಸ್ಟರ್ ಮೈಂಡ್‌ಗಳೆಂಬುದು ತನಿಖೆಯಿಂದ ತಿಳಿದುಬಂದಿದೆ.

## MakeMyTrip ಹೆಸರಲ್ಲಿ ದೋಖಾ: ಮಹಿಳೆಯೊಬ್ಬರಿಗೆ ರೂ.೧೫ಲಕ್ಷ ಪಂಗನಾಮ



ಕೊಯಮತ್ತೂರು ನಿವಾಸಿಯೊಬ್ಬರು ಮೇಕ್ ಮೈ ಟ್ರಿಪ್ ಉದ್ಯೋಗಿ ಎಂದು ಹೇಳಿಕೊಂಡು ನಂಬಲಸಾಧ್ಯವಾದ ಲಾಭದ ಭರವಸೆ ನೀಡಿ ಕಾಲ್ಪನಿಕ ಹೂಡಿಕೆ ಅವಕಾಶದ ಆಮಿಷವೊಡ್ಡಿರುವ ವಂಚಕರು ತಮಿಳುನಾಡು ಮೂಲದ ಮಹಿಳೆಯೊರ್ವರಿಂದ ರೂ. 15 ಲಕ್ಷಕ್ಕೂ ಹೆಚ್ಚು ಹಣವನ್ನು ವಂಚಿಸಿರುವ ಘಟನೆ ವರದಿಯಾಗಿದೆ.

## ನಕಲಿ ಪ್ರಮಾಣ ಪತ್ರ ಹಗರಣ: ವೆಬ್‌ಸೈಟ್ ನಿರ್ವಾಹಕನ ಬಂಧನ

ಪ್ರಧಾನ ಮಂತ್ರಿ ಜೀವನ್ ಜ್ಯೋತಿ ಬಿಮಾ ಯೋಜನೆ ಅಡಿಯಲ್ಲಿ ಮೋಸದ ವಿಮಾ ಕ್ಲೈಮ್‌ಗಳಿಗಾಗಿ ನಕಲಿ ಜನನ ಮತ್ತು ಮರಣ ಪ್ರಮಾಣಪತ್ರಗಳನ್ನು ನೀಡುವ ವೆಬ್ಸೈಟ್ ಅನ್ನು ನಿರ್ವಹಿಸುತ್ತಿದ್ದ ಉತ್ತರಪ್ರದೇಶದ ಇಟಾ ಮೂಲದ ವ್ಯಕ್ತಿಯನ್ನು ಲಕ್ನೋ ಪೊಲೀಸರ ಸೈಬರ್ ಅಪರಾಧ ವಿಭಾಗ ಬಂಧಿಸಿದೆ.

# Online Frauds

## Bengaluru Residents Lose Over Rs 470 Crore to Cybercrimes in 9 Months



An analysis of Bengaluru police data reveals that residents in the city lost more than Rs 1.71 crore daily to various cybercrimes, with over 12,600 cases reported in 9 months, primarily involving online job and debit/credit card fraud

## Biocon Foils $738,182 Phishing Scam Thanks to Escrow Account

Indian biopharmaceutical company Biocon unknowingly transferred $738,182 to fraudsters in a phishing scheme, but the use of an escrow account protected their funds until suspicions arose, leading to the return of the full amount.

## Rising AEPS-Based Cyber Fraud Incidents Prompt Proposal for Aadhar Biometric Lock



**Mangaluru:** Multiple victims have reported unauthorized deductions from their bank accounts after providing Aadhaar details and fingerprints during registration of documents at the sub-registrar's office. At least 15 individuals have filed complaints, with losses ranging from ₹10,000 to ₹1 lakh.

## MP Dayanidhi Maran Falls Victim to Unauthorised Bank Debit Scam



DMK MP Dayanidhi Maran filed a complaint about an unknown caller who fraudulently debited around Rs 99,999 from his bank account, leading to a police investigation and a warning about online banking frauds.

## Rs 18.35 lakh duped by fraudsters on the pretext of work



A 39-year-old man was scammed of ₹18.35 lakh by online fraudsters who lured him with a work-from-home opportunity, fraudsters lured him to deposit an advance for earning profit.

# Online Frauds

## Four Suspects Booked in Rs 25 Crore Payment Gateway Hack involving Forged Documents

A payment gateway hack linked to a fake firm and forged documents reveals transactions exceeding Rs 16,180 crore, with foreign account transfers, as investigators delve deeper into the case.

## Airport Supervisor in Hyderabad Dies by Suicide Amid Pressure from Loan App Agents



A 22-year-old airport supervisor took his own life after alleged harassment by online loan app agents who sent explicit manipulated videos.

## Bengaluru police succeed in busting massive cyber fraud network



Bengaluru cyber police uncovered a colossal online fraud network that funnelled Rs 854 crore through 84 bank accounts linked to over 5000 cases in two years. The network lured victims across India via social media.

## Dhokha in the name of MakeMyTrip: Rs 15 lakh panganama for a woman



A Coimbatore-based woman was duped of Rs 10,000 by fraudsters who claimed to be a MakeMyTrip employee and offered her an imaginary investment opportunity promising incredible returns. More than Rs 15 lakh has been swindled.

## Fake certificate scam: Website administrator arrested

The Lucknow Police's Cyber Crime cell apprehended a man of Etah, UP, for operating a website that issued counterfeit birth and death certificates for fraudulent insurance claims under the Prime Minister Jeevan Jyoti Bima Yojana.

## ಅಕ್ಟೋಬರ್ ಸೈಬರ್ ಭದ್ರತೆಯ ಜಾಗೃತಿ ಮಾಸಾಚರಣೆಯ ಅಂಗವಾಗಿ ರಾಜ್ಯದ ಆಯ್ದ ಜಿಲ್ಲೆಗಳಲ್ಲಿ ಖ್ಯಾತ ಹಾಸ್ಯ ಕಲಾವಿದರುಗಳಿಂದ 'ಸೈಬರ್ ಹಾಸ್ಯ ಸಂಜೆ' ಕಾರ್ಯಕ್ರಮ

- ಅಕ್ಟೋಬರ್ ಸೈಬರ್ ಭದ್ರತೆಯ ಜಾಗೃತಿ ಮಾಸಾಚರಣೆಯ ಅಂಗವಾಗಿ ಕೊಪ್ಪಳ, ಶಿವಮೊಗ್ಗ, ಹಾಸನ, ಬೀದರ್, ಕಲ್ಬುರ್ಗಿ, ಸಿರಗುಪ್ಪ, ಧಾರವಾಡ, ಹೂವಿನ ಹಡಗಲಿ, ಬೆಂಗಳೂರು ಮತ್ತು ಮೂಡಬಿದರೆ ಗಳಲ್ಲಿ ಹಮ್ಮಿಕೊಳ್ಳಲಾಗಿದ್ದ ಸೈಬರ್ ಹಾಸ್ಯ ಸಂಜೆ ಕಾರ್ಯಕ್ರಮವು ಅತಿ ಹೆಚ್ಚು ಜನರನ್ನು ತಲುಪುವಲ್ಲಿ ಯಶಸ್ವಿಯಾಗಿದೆ.









## CISO-KA platform ನ ಲೋಕಾರ್ಪಣೆ

- CISO-KA platform (Chief Information Security Officers – Karnataka) ಅನ್ನು 17ನೇ ಅಕ್ಟೋಬರ್ ರಂದು ವಿಕಾಸಸೌಧದಲ್ಲಿ ಪ್ರಾರಂಭಿಸಲಾಯಿತು, ಐಟಿ ಕ್ಷೇತ್ರದ ದೈತ್ಯ ಕಂಪನಿಗಳಾದ ಸಿಸ್ಕೊ, ಇನ್ಫೋಸಿಸ್ ಮತ್ತು ವಿಪ್ರೋ ಸೇರಿದಂತೆ 15 CISO ಗಳು ಸ್ಥಾಪಕ ಸದಸ್ಯರಾಗಿ ಭಾಗವಹಿಸುವ ಮೂಲಕ ಭರವಸೆಯ ಬೆಂಬಲವನ್ನು ಖಚಿತಪಡಿಸಿದರು.






## Cyber Haasya Sanje programme by renowned comedians in selected districts of the state as part of October Cyber Security Awareness Month celebrations

- During the October Cyber Security Awareness Month campaign, the "Cyber Haasya Sanje" events resonated across multiple cities, including Koppal, Shivamogga, Hassan, Bidar, Kalburgi, Siraguppa, Dharwad, Hoovina Hadagali, Bengaluru, and Moodabidri. These gatherings served as informative and engaging platforms for raising cyber awareness, emphasizing the importance of digital safety, and fostering a more secure online environment in various regions.









## Launching of CISO-KA platform

- CISO-KA platform (Chief Information Security Officers – Karnataka) was launched on 17th Oct at Vikasa Soudha, got a promising support by participation of 15 CISOs as founding members, including IT giants like Cisco, Infosys & Wipro.






# ಉಪಯುಕ್ತ ಲಿಂಕ್‌ಗಳು | Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು **cybercrime.gov.in**
- ತಪ್ಪು ಮಾಹಿತಿ ಗುರುತಿಸಲು - **https://factcheck.ksp.gov.in**
- ಕರ್ನಾಟಕ ಸೈಬರ್ ಅಪರಾಧ ಸಹಾಯವಾಣಿ ಸಂಖ್ಯೆ 112
- ರಾಷ್ಟ್ರೀಯ ಸಹಾಯವಾಣಿ 1930 ಗೆ ಕರೆ ಮಾಡಿ

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Karnataka Cyber Crime Helpline Number 112**
- **National Helpline Number 1930**



# ನಮ್ಮ ಬಗ್ಗೆ | About CySecK




ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government’s K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.